ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

**ಮೈಸೂರು ಕೃಷ್ಣರಾಜೇಂದ್ರ ಆಸ್ಪತ್ರೆಯ ಕಟ್ಟಡ.**

7321 - ಶ್ರೀ ಕೆ. ಹರ್ಷಕುಮಾರ ಗೌಡ (ಚಾಮರಾಜ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಮೈಸೂರು ನಗರದ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿನ ಅರ್ಧಕ್ಕೆ ನಿಂತಿರುವ ಕಟ್ಟಡ ನಿರ್ಮಾಣವನ್ನು ಯಾವಾಗ ಪೂರೈಸಲಾಗುವುದು?*

*ಆ) ಮೈಸೂರು ನಗರದ ಪ್ರಸಕ್ತ ಜನಸಂಖ್ಯೆಗೆ ಅನುಗುಣವಾಗಿ ಆಸ್ಪತ್ರೆಯನ್ನು ಸಂಪೂರ್ಣವಾಗಿ ಸಜ್ಜುಗೊಳಿಸಲು ಸರ್ಕಾರ ತೆಗೆದುಕೊಂಡ ಕ್ರಮವೇನು?*

*ಇ) ಆಸ್ಪತ್ರೆಗೆ ಬೇಕಾಗಿರುವಂತ ನೂತನ ಎಕ್ಸ್‌ರೇ, ಹೃದ್ರೋಗಕ್ಕೆ ಬೇಕಾಗುವಂತಹ ಹಾಗೂ ಪತ್ತೆ ಹಚ್ಚುವ ಯಂತ್ರೋಪಕರಣಗಳನ್ನು ಯಾವಾಗ ಸರಬರಾಜು ಮಾಡಲಾಗುವುದು?*

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ದುರಸ್ತಿ ಕಾಮಗಾರಿಯು ಪ್ರಗತಿಯಲ್ಲಿದೆ. ಬಾಕಿ ಉಳಿದಿರುವ ಕಾಮಗಾರಿಯನ್ನು ಪೂರ್ಣಗೊಳಿಸುವ ವಿಷಯ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಆ) ಮೈಸೂರು ನಗರದ ಜನಸಂಖ್ಯೆಗೆ ಅನುಗುಣವಾಗಿ ಮೈಸೂರು ನಗರದ ಆಸ್ಪತ್ರೆಯಲ್ಲಿ ಈಗಿರುವ ಸೌಲಭ್ಯದಲ್ಲಿ ಸಾರ್ವಜನಿಕರಿಗೆ ಸಾಕಷ್ಟು ಅನುಕೂಲವನ್ನು ಒದಗಿಸಲಾಗುತ್ತಿದೆ. ಆದಾಗ್ಯೂ ಸರ್ಕಾರವು ಇಷ್ಟಕ್ಕೆ ತೃಪ್ತಿಗೊಂಡಿಲ್ಲ. ಹಣದ ಲಭ್ಯತೆಯನ್ನು ಅನುಸರಿಸಿ, ನಗರದಲ್ಲಿರುವ ಸರ್ಕಾರಿ ಆಸ್ಪತ್ರೆಗಳ ಅವಶ್ಯಕತೆಗಳನ್ನು ಪೂರೈಸಲಾಗುವುದು.

ಇ) ಹೊಸ ಕ್ಷ-ಕಿರಣ ಯಂತ್ರಗಳನ್ನು ಮತ್ತು ಹೃದ್ರೋಗ ಪತ್ತೆ ಹಚ್ಚಲು ಬೇಕಾಗುವ ಹೆಚ್ಚುವರಿ ಯಂತ್ರೋಪಕರಣಗಳನ್ನು ಒದಗಿಸಲು ಆರ್ಥಿಕ ಅನುಕೂಲತೆಯನ್ನು ನೋಡಿಕೊಂಡು ಕ್ರಮ ತೆಗೆದುಕೊಳ್ಳಲಾಗುವುದು.

**ರಾಜ್ಯದಲ್ಲಿರುವ ವೈದ್ಯಕೀಯ ಕಾಲೇಜುಗಳ ಸಂಖ್ಯೆ.**

3736 - ಶ್ರೀ ಕೆ. ಹರ್ಷಕುಮಾರಗೌಡ (ಚಾಮರಾಜ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಕರ್ನಾಟಕ ರಾಜ್ಯದಲ್ಲಿ ಪ್ರಸಕ್ತ ಇರುವ ಮೆಡಿಕಲ್ ಕಾಲೇಜುಗಳೆಷ್ಟು ಮತ್ತು ಅವುಗಳ ಹೆಸರುಗಳೇನು?*

*ಆ) ವಿವಿಧ ಮೆಡಿಕಲ್ ಕಾಲೇಜುಗಳಲ್ಲಿ ಪ್ರವೇಶ ಕೊಡಲು ಸರ್ಕಾರ ಅನುಮತಿ ಕೊಟ್ಟಿರುವ ಸಂಖ್ಯೆ ಎಷ್ಟು?*

*ಇ) ಈ ಮೆಡಿಕಲ್ ಕಾಲೇಜುಗಳಲ್ಲಿ ಸರ್ಕಾರ ಮಂಜೂರು ಮಾಡಿರುವುದಕ್ಕಿಂತ ಮೀರಿ ಪ್ರವೇಶ ಕೊಟ್ಟಿರುವ ಕಾಲೇಜುಗಳ ಹೆಸರುಗಳೇನು?*

*ಈ) ಹೊಸದಾಗಿ ವೈದ್ಯಕೀಯ ಕಾಲೇಜು ಪ್ರಾರಂಭ ಮಾಡಲು ಅರ್ಜಿ ಸಲ್ಲಿಸಿರುವ ಸಂಸ್ಥೆಗಳ ಹೆಸರುಗಳೇನು? ಇವುಗಳಿಗೆ ಅನುಮತಿ ನೀಡಲು ಸರ್ಕಾರ ಯಾವಾಗ ತೀರ್ಮಾನಿಸಿರುವುದು?*

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) 18.

<u>ಸರ್ಕಾರಿ ಮೆಡಿಕಲ್ ಕಾಲೇಜುಗಳು</u>

1) ಬೆಂಗಳೂರು ಮೆಡಿಕಲ್ ಕಾಲೇಜು, ಬೆಂಗಳೂರು
2) ಮೈಸೂರು ಮೆಡಿಕಲ್ ಕಾಲೇಜು, ಮೈಸೂರು
3) ಕರ್ನಾಟಕ ಮೆಡಿಕಲ್ ಕಾಲೇಜು, ಹುಬ್ಬಳ್ಳಿ
4) ಬಳ್ಳಾರಿ ಮೆಡಿಕಲ್ ಕಾಲೇಜು, ಬಳ್ಳಾರಿ

<u>ಖಾಸಗಿ ಮೆಡಿಕಲ್ ಕಾಲೇಜುಗಳು</u>

5) ಕಸ್ತೂರಬಾ ಮೆಡಿಕಲ್ ಕಾಲೇಜು, ಮಂಗಳೂರು
   ಕಸ್ತೂರಬಾ ಮೆಡಿಕಲ್ ಕಾಲೇಜು ಮಣಿಪಾಲ್
6) ಸೆಂಟ್ ಜಾನ್ಸ್ ಮೆಡಿಕಲ್ ಕಾಲೇಜು, ಬೆಂಗಳೂರು
7) ಜೆ.ಎನ್.ಮೆಡಿಕಲ್ ಕಾಲೇಜು, ಬೆಳಗಾಂ
8) ಜೆ.ಜೆ.ಎಂ. ಮೆಡಿಕಲ್ ಕಾಲೇಜು ದಾವಣಗೆರೆ
9) ಎಂ.ಆರ್.ಮೆಡಿಕಲ್ ಕಾಲೇಜು, ಗುಲ್ಬರ್ಗಾ
10) ಜೆ.ಎಸ್.ಎಸ್.ಮೆಡಿಕಲ್ ಕಾಲೇಜು, ಮೈಸೂರು
11) ಎಂ.ಎಸ್. ರಾಮಯ್ಯ ಮೆಡಿಕಲ್ ಕಾಲೇಜು, ಬೆಂಗಳೂರು
12) ಕೆಂಪೇಗೌಡ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬೆಂಗಳೂರು
13) ಡಾ. ಬಿ.ಆರ್. ಅಂಬೇಡ್ಕರ್ ಮೆಡಿಕಲ್ ಕಾಲೇಜು, ಬೆಂಗಳೂರು
14) ಆದಿಚುಂಚನಗಿರಿ ಇನ್ಸ್ಟ್ಯೂಟ್ ಆಫ್ ಮೆಡಿಕಲ್ ಸೈನ್ಸ್, ಬೆಂಗಳೂರು
15) ಶ್ರೀ ದೇವರಾಜ ಅರಸ್ ಮೆಡಿಕಲ್ ಕಾಲೇಜು, ಕೋಲಾರ
16) ಆಲ್ ಅಮೀನ್ ಮೆಡಿಕಲ್ ಕಾಲೇಜು, ಬಿಜಾಪುರ
17) ಬಿಎಲ್‌ಡಿಇಎ ಮೆಡಿಕಲ್ ಕಾಲೇಜು, ಬಿಜಾಪುರ
18) ಶ್ರೀ ಸಿದ್ಧಾರ್ಥ ಮೆಡಿಕಲ್ ಕಾಲೇಜು, ತುಮಕೂರು

ಆ)

1) ಬೆಂಗಳೂರು ಮೆಡಿಕಲ್ ಕಾಲೇಜು, ಬೆಂಗಳೂರು -200
2) ಮೈಸೂರು ಮೆಡಿಕಲ್ ಕಾಲೇಜು, ಮೈಸೂರು -175
3) ಕರ್ನಾಟಕ ಮೆಡಿಕಲ್ ಕಾಲೇಜು, ಹುಬ್ಬಳ್ಳಿ - 130
4) ಬಳ್ಳಾರಿ ಮೆಡಿಕಲ್ ಕಾಲೇಜು, ಬಳ್ಳಾರಿ 180
5) ಕಸ್ತೂರಬಾ ಮೆಡಿಕಲ್ ಕಾಲೇಜು, ಮಂಗಳೂರು - 300
   ಕಸ್ತೂರಬಾ ಮೆಡಿಕಲ್ ಕಾಲೇಜು, ಮಣಿಪಾಲ್ - 250
6) ಸೆಂಟ್‌ಜಾನ್ಸ್ ಮೆಡಿಕಲ್ ಕಾಲೇಜು, ಬೆಂಗಳೂರು - 60
7) ಜಿಎನ್ ಮೆಡಿಕಲ್ ಕಾಲೇಜು ಬೆಳಗಾಂ. - 175
8) ಎಂಆರ್ ಮೆಡಿಕಲ್ ಕಾಲೇಜು, ಗುಲ್ಬರ್ಗಾ 170

9) ಜೆಜೆಎಂ ಮೆಡಿಕಲ್ ಕಾಲೇಜು, ದಾವಣಗೆರೆ - 300

10) ಎಂಎಸ್ ರಾಮಯ್ಯ ಮೆಡಿಕಲ್ ಕಾಲೇಜು, ಬೆಂಗಳೂರು - 100

11) ಕೆಂಪೇಗೌಡ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬೆಂಗಳೂರು-100

12) ಡಾ.ಬಿ.ಆರ್. ಅಂಬೇಡ್ಕರ್ ಮೆಡಿಕಲ್ ಕಾಲೇಜು, ಬೆಂಗಳೂರು -100

13) ಅಲ್ ಅಮೀನ್ ಮೆಡಿಕಲ್ ಕಾಲೇಜು, ಬಿಜಾಪುರ -120

14) ಜೆಎಸ್ಎಸ್ ಮೆಡಿಕಲ್ ಕಾಲೇಜು, ಮೈಸೂರು -200

15) ಆದಿಚುಂಚನಗಿರಿ ಇನ್ಸ್ಟ್ಯೂಟ್ ಆಫ್ ಮೆಡಿಕಲ್ ಸೈನ್ಸ್, ಬೆಳ್ಳೂರು-75

16) ಬಿಎಲ್‌ಡಿಇಎ ವೈದ್ಯಕೀಯ ಕಾಲೇಜು, ಬಿಜಾಪುರ - 160

17) ಶ್ರೀ ದೇವರಾಜ ಅರಸ್ ಮೆಡಿಕಲ್ ಕಾಲೇಜು, ಕೋಲಾರ - 150

18) ಶ್ರೀ ಸಿದ್ಧಾರ್ಥ ಮೆಡಿಕಲ್ ಕಾಲೇಜು, ತುಮಕೂರು - 175

ಇ) ಇಲ್ಲ.

ಈ)

1) ಶ್ರೀ ಜಗದ್ಗುರು ಮುರುಘರಾಜೇಂದ್ರ ವಿದ್ಯಾಪೀಠ, ಚಿತ್ರದುರ್ಗ

2) ಸಿದ್ಧಗಂಗಾ ಎಜುಕೇಷನ್ ಸೊಸೈಟಿ, ತುಮಕೂರು

3) ಅಲ್ ಮಹಮದ್ ಸೊಸೈಟಿ, ಭದ್ರಾವತಿ

4) ಶರವೇಶ್ವರ ವಿದ್ಯಾಪೀಠ, ಬಳ್ಳಾರಿ

5) ನಿಟ್ಟೆ ಎಜುಕೇಷನ್ ಟ್ರಸ್ಟ್, ಕಾರ್ಕಳ, ದಕ್ಷಿಣ ಕನ್ನಡ

6) ಅಕಾಡೆಮಿ ಆಫ್ ಲಿಬರಲ್ ಎಜುಕೇಷನ್, ಸುಳ್ಯ, ದಕ್ಷಿಣ ಕನ್ನಡ

7) ಕರ್ನಾಟಕ ಲಾ ಸೊಸೈಟಿ ಬೆಳಗಾಂ

8) ಮಲೆನಾಡು ಮೆಡಿಕಲ್ ಕಾಲೇಜು ಬಿ.ಆರ್.ಅಂಬೇಡ್ಕರ್ ಮಿಷನ್ ಶಿವಮೊಗ್ಗ

9) ರಾಷ್ಟ್ರೀಯ ಶಿಕ್ಷಣ ಸಮಿತಿ, ಶಿವಮೊಗ್ಗ

10) ಫಾದರ್‌ಮುಲ್ಲರ್ ಇನ್ಸ್ಟಿಟ್ಯೂಟ್, ಕಂಕನಾಡಿ ಮಂಗಳೂರು

11) ಸಹ್ಯಾದ್ರಿ ಎಜುಕೇಷನ್ ಟ್ರಸ್ಟ್, ಶಿವಮೊಗ್ಗ

12) ಶ್ರೀ ವೀಣಾಶಾರದ ಎಜುಕೇಷನ್ ಸೊಸೈಟಿ, ಹಾಸನ

13) ತಾರನಾಥ ಶಿಕ್ಷಣ ಸಂಸ್ಥೆ, ರಾಯಚೂರು

14) ಕರ್ನಾಟಕ ರಾಷ್ಟ್ರೀಯ ಶಿಕ್ಷಣ ಸಂಸ್ಥೆ, ಬೀದರ್

15) ಖಾಜಾ ಶಿಕ್ಷಣ ಸಂಸ್ಥೆ, ಗುಲ್ಬರ್ಗಾ

16) ಅಲ್ ಮಹಮದ್ ವಿದ್ಯಾಸಂಸ್ಥೆ, ಶಿವಮೊಗ್ಗ

17) ಶರಭೇಶ್ವರಿ ವಿದ್ಯಾಪೀಠ, ಬಂಡಿಪ್ಲೋಟ್, ಬಳ್ಳಾರಿ

18) ನಾನಕ್‌ಬೀರ್ ಫೌಂಡೇಶನ್, ಬೀದರ್

19) ಜಗದ್ಗುರು ಮೂರುಸಾವಿರದ ಮಠ ಜೆ.ಜೆ.ಸಹಕಾರ ಸಂಘ ರೂರಲ್ ಮೆಡಿಕಲ್ ಕಾಲೇಜು, ಹುಬ್ಬಳ್ಳಿ

20) ಶ್ರೀ ವೀಣಾಶಾರದ ಎಜುಕೇಷನ್ ಸೊಸೈಟಿ, ಶಿವಮೊಗ್ಗ

21) ಚಾಮುಂಡಿ ಮೆಡಿಕಲ್ ಫೌಂಡೇಶನ್, ಬೆಂಗಳೂರು

22) ಕರ್ನಾಟಕ ಪೀಪಲ್ ಎಜುಕೇಷನ್ ಸೊಸೈಟಿ ಗುಲ್ಬರ್ಗಾ

ಪರಿಶೀಲನೆಯಲ್ಲಿದೆ.

**ರಾಜ್ಯದಲ್ಲಿರುವ ದಂತ ವೈದ್ಯ ಕಾಲೇಜುಗಳ ಸಂಖ್ಯೆ.**

3737 - ಶ್ರೀ ಕೆ. ಹರ್ಷಕುಮಾರಗೌಡ (ಚಾಮರಾಜ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

*ಅ) ಕರ್ನಾಟಕ ರಾಜ್ಯದಲ್ಲಿ ಪ್ರಸಕ್ತ ಕಾರ್ಯನಿರ್ವಹಿಸುತ್ತಿರುವ ದಂತ ವೈದ್ಯ ಕಾಲೇಜುಗಳೆಷ್ಟು. ಮತ್ತು ಇವುಗಳ ಹೆಸರುಗಳೇನು?*

*ಆ) ದಂತ ವೈದ್ಯ ಕಾಲೇಜುಗಳಲ್ಲಿ ಸರ್ಕಾರಿ ಮತ್ತು ಖಾಸತಗಿಯವುಗಳು ಎಷ್ಟು?*

*ಇ) ವಿವಿಧ ದಂತ ವೈದ್ಯ ಕಾಲೇಜುಗಳಲ್ಲಿ ಪ್ರತಿ ವರ್ಷ ಪ್ರವೇಶ ಅವಕಾಶ ಪಡೆಯುತ್ತಿರುವ ಅಭ್ಯರ್ಥಿಗಳ ಸಂಖ್ಯೆ ಎಷ್ಟು?*

*ಈ) ಈಗಿನ ಸರ್ಕಾರ ಪ್ರಸಕ್ತ ಮಂಜೂರು ಮಾಡಿರುವ ದಂತ ವೈದ್ಯ ಕಾಲೇಜುಗಳ ಸಂಖ್ಯೆ ಮತ್ತು ಹೆಸರುಗಳೇನು ಮತ್ತು ಹೊಸದಾಗಿ ಪ್ರಾರಂಭಿಸಲು ಅರ್ಜಿ ಸಲ್ಲಿಸಿರುವ ಸಂಸ್ಥೆಗಳ ಹೆಸರುಗಳೇನು?*

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕು.ಕ.ಸಚಿವರು):

ಅ) 16

1. ಸರ್ಕಾರಿ ದಂತ ಕಾಲೇಜು, ಬೆಂಗಳೂರು 1

*ಖಾಸಗಿ ದಂತ ಕಾಲೇಜುಗಳು*

1. ಕಸ್ತೂರಬಾ ವೈದ್ಯಕೀಯ ಕಾಲೇಜು, ಮಂಗಳೂರು ವಿಂಗ್
2. ಕಸ್ತೂರಬಾ ವೈದ್ಯಕೀಯ ಕಾಲೇಜು, ಮಣಿಪಾಲ್ ವಿಂಗ್
3. ಎ.ಬಿ.ಶೆಟ್ಟಿ, ದಂತ ಕಾಲೇಜು, ಮಂಗಳೂರು
4. ರಮಾಬಾಯಿ ಅಂಬೇಡ್ಕರ್ ದಂತ ಕಾಲೇಜು, ಬೆಂಗಳೂರು
5. ಎಸ್.ಡಿ.ಎಂ. ದಂತ ಕಾಲೇಜು, ಧಾರವಾಡ
6. ಎಸ್.ಜೆ.ಎಂ. ದಂತ ಕಾಲೇಜು, ಚಿತ್ರದುರ್ಗ
7. ಕೆ.ಎಲ್.ಇ. ದಂತ ಕಾಲೇಜು, ಬೆಳಗಾಂ
8. ಜೆ.ಎಸ್.ಎಸ್. ದಂತ ಕಾಲೇಜು, ಮೈಸೂರು
9. ಪಿ.ಎಂ. ನಾಡಗೌಡ ದಂತ ಕಾಲೇಜು, ಬಾಗಲಕೋಟೆ
10. ಬಾಪೂಜಿ ದಂತ ಕಾಲೇಜು, ದಾವಣಗೆರೆ
11. ಹೆಚ್.ಕೆ.ಇ. ದಂತ ಕಾಲೇಜು, ಗುಲ್ಬರ್ಗಾ
12. ಒಕ್ಕಲಿಗರ ಸಂಘ ದಂತ ಕಾಲೇಜು, ಬೆಂಗಳೂರು